## ಹಿಂಸಾವಿನೋದ ನಿಯಂತ್ರಣ ಅಗತ್ಯ

ಸಮಾಜಕ್ಕೆ ತಪ್ಪು ಸಂದೇಶಗಳು ಹೋಗದಂತೆ, ಸಮಾಜದ ಯಾವ ವರ್ಗದ ಜನರ ಮನಸ್ಸಿಗೂ ನೋವಾಗದ ಆಕ್ಷೇಪಾರ್ಹ ಕಥೆ, ಸಂಭಾಷಣೆ, ಹಿಂಸೆಯ ದೃಶ್ಯ ನಿಯಂತ್ರಿಸಲು ಸಿನಿಮಾಗಳಂತೆ ಟೀವಿ ಕಾರ್ಯಕ್ರಮ ಮತ್ತು ಧಾರಾವಾಹಿಗಳನ್ನು ಸೆನ್ಸಾರ್‌ಗೆ ಒಳಪಡುವುದಿಲ್ಲವೇಕೆ? ಪ್ರಸಾರವಾಗುತ್ತಿರುವ ಕೆಲವು ಧಾರಾವಾಹಿಗಳಲ್ಲಿನ ಸಂಭಾಷಣೆ, ದೃಶ್ಯಗಳು, ಹಿಂಸೆ, ಕ್ರೌರ್ಯವನ್ನು ಬಿತ್ತರಿಸುತ್ತವೆ. ಅಂತಹ ಹಿಂಸಾವಿನೋದ ತಡೆಗೆ ಸೆನ್ಸಾರ್ ಅಗತ್ಯ ಎಂದು ಅನಿಸುತ್ತದೆ. 'ಗೌರಿಪುರದ ಗಯ್ಯಾಳಿಗಳು', 'ದೊರೆಸಾನಿ', 'ಲಕ್ಷ್ಮೀ ಬಾರಮ್ಮ'ದಂತಹ ಗಯ್ಯಾಳಿಗಳ ಪಾತ್ರ ನೋಡಿದಾಗಲೆಲ್ಲ ಹೀಗೆನಿಸುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## 'ನಮ್ಮ ಸೌಂದರ್ಯ' ನೆನಪು ಚಿರನೂತನ

ಅಚ್ಚಕನ್ನಡತಿ ಸೌಂದರ್ಯ ಅವರ ಅಮೋಘ ಅಭಿನಯದ ಚಿತ್ರಗಳ ಪರಿಚಯ ಮಾಡಿಕೊಟ್ಟ ಚಂದನ ವಾಹಿನಿಯವರಿಗೆ ಧನ್ಯವಾದ. 'ನಮ್ಮ ಸೌಂದರ್ಯ' ತನ್ನ ಮುಗ್ಧ ಸೌಂದರ್ಯದಿಂದಲೇ ಸಹೃದಯರ ಮನಸೂರೆ ಮಾಡಿದ್ದರು. ಅವರ ಅದ್ಭುತ ನಟನಾ ಕೌಶಲ ಮರೆಯಲಾಗದು. ಅವರ ಬದುಕಿನ ದುರಂತ ಅಂತ್ಯ ಆಕಸ್ಮಿಕ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಕರ್ಣನ ಹುಚ್ಚಾಟಕ್ಕೆ ಸಮಾಜದ ಕುರುಡು

ಕಲರ್ಸ್ ಕನ್ನಡದ 'ಕರಿಮಣಿ' ಧಾರಾವಾಹಿಯಲ್ಲಿ ಸಾಹಿತ್ಯಳಿಗೆ ರಿಷಿ ಮೋಸ ಮಾಡಿದನೆಂದು ಕರ್ಣ ಶಿಕ್ಷಿಸುತ್ತಾನೆ. ರಿಷಿಯನ್ನು ತನ್ನ ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡು ಹೋಗಿ ಜನದಟ್ಟಣೆ ಇರುವ ಸ್ಥಳದಲ್ಲಿ ಕೈಗಳನ್ನು ಕಟ್ಟಿಹಾಕಿ ಅವನ ಕತ್ತಿನಲ್ಲಿ ನಿಂದನಾ ಬರಹದ ಸ್ಲೇಟ್ ಹಾಕಿ ರಸ್ತೆಯಲ್ಲಿ ನಡೆದು ಹೋಗಲು ಹೇಳುತ್ತಾನೆ.

ರಿಷಿ ತಪ್ಪು ಮಾಡಿದ್ದಾನೆ ನಿಜ. ಆದರೆ ಕರ್ಣನ ಹಿಂಸೆಯ ಬಗ್ಗೆ ಯಾರೊಬ್ಬರೂ ವಿಚಾರಿಸುವ ವಿವೇಕವನ್ನು ತೋರಿಸುತ್ತಿಲ್ಲ. ನಮ್ಮ ಜನರಿಗೆ ಏನಾಗಿದೆ? ಯಾರೂ ಕರ್ಣನ ಪ್ರಶ್ನಿಸುವುದಿಲ್ಲ ಎಂದರೆ ನಮ್ಮ ಸಮಾಜದ ಸ್ಥಿತಿ ಈ ಮಟ್ಟಿಗೆ ಸಂವೇದನೆ ಕಳೆದುಕೊಂಡಿದೆ ಎಂದು ಅರ್ಥವೇ? ಅಥವಾ ಕಥೆಯನ್ನು ಕೊಂಚವೂ ವಿವೇಕವಿಲ್ಲದೆ ರೂಪಿಸುತ್ತಿದ್ದಾರೆ ಎಂದು ಅರ್ಥವೇ?

—ಜಯಂತಿ ಶಾಸ್ತ್ರಿ, ಮೈಸೂರು

ವಾರದ ಪತ್ರ



## ಈ ಪಾತ್ರ ನ್ಯಾಯವೆ?

ಝೀ ಕನ್ನಡ ವಾಹಿನಿಯ 'ಅಮೃತ ಧಾರೆ' ಧಾರಾವಾಹಿಯಲ್ಲಿ ಹಿರಿಯ ಕಲಾವಿದ ಶೃಂಗೇರಿ ರಾಮಣ್ಣ ಸ್ವಾಮೀಜಿಯ ಪಾತ್ರವನ್ನು ಮಾಡಿದ್ದಾರೆ. ಮೇಲ್ನೋಟಕ್ಕೆ ಇದು ಅವರಿಗೊಪ್ಪುವ ಗೌರವಾನ್ವಿತ ಪಾತ್ರ. ಈಗ ಸಾಮಾನ್ಯವಾಗಿ ಎಲ್ಲ ಧಾರಾವಾಹಿಗಳಲ್ಲೂ ಇಂತಹ ಪಾತ್ರವೊಂದನ್ನು ಸೃಷ್ಟಿ ಮಾಡುತ್ತಿದ್ದಾರೆ. ಆದರೆ ಆ ಪಾತ್ರ ಮಾತ್ರ ವೈಚಾರಿಕ ಇಲ್ಲವೇ ಆಧ್ಯಾತ್ಮಿಕ ವಿಷಯಕ್ಕೆ ತುಡಿಯುವುದಿರಲಿ, ಆ ಬಗ್ಗೆ ಮಾತನಾಡುವುದಿಲ್ಲ. ಸುಳ್ಳು ಜ್ಯೋತಿಷ್ಯ, ಮಾಟ–ಮಂತ್ರದ ತಂತ್ರಗಳನ್ನು ಹೇಳಿ ಮನೆ ಹಾಳು ಮಾಡುವ ಕೆಲಸಕ್ಕೆ ಅದು ಮೀಸಲಾಗುತ್ತದೆ. 'ಎಲ್ಲರೂ ಮಾಡುವುದು ಹೊಟ್ಟೆಗಾಗಿಯೇ' ಎಂಬ ಮಾತು ನಿಜವಾದರೂ ಇಂತಹ ಕೆಟ್ಟ ಪಾತ್ರ ಮಾಡಿದಾಗ ಸಹಜವಾಗಿಯೇ ಬೇಸರ ಉಂಟಾಗುತ್ತದೆ. ನಾವು ಗೌರವಿಸುವ ವ್ಯಕ್ತಿಯೊಬ್ಬರು ಇಂತಹ ಪಾತ್ರದಲ್ಲಿ ಕಂಡಾಗ ನಮ್ಮ ನಂಬಿಕೆಗಳಿಗೂ ಪೆಟ್ಟು ಬೀಳುತ್ತದೆ.

—ವಾ. ಮುರಳೀಧರ, ತೀರ್ಥಹಳ್ಳಿ



## ಕಾನೂನು ಪಾಲನೆಯಲ್ಲಿ ಅಸತ್ಯ

ಕಾನೂನು, ಸತ್ಯ, ಧರ್ಮ, ನ್ಯಾಯ ಎಂಬ ಆದರ್ಶದ ಮಾತುಗಳು ಕೇವಲ ಬೇರೆಯವರಿಗೆ ಬೋಧಿಸಲು ಇರುವ ಪದಗಳೇ ಹೊರತು ಸ್ವಯಂ ಪಾಲಿಸುವುದಕ್ಕಲ್ಲ ಎಂಬುದು ನಮ್ಮ ಟೀವಿ ವಾಹಿನಿಗಳ ದೃಢ ನಿಲುವು ಇರುವಂತಿದೆ. 'ಹೆಲ್ಮೆಟ್ ರಹಿತ ದ್ವಿಚಕ್ರವಾಹನ ಚಾಲನೆ ಕಾನೂನು ಬಾಹಿರ ಮತ್ತು ಅಪಾಯಕಾರಿ' ಎಂಬ ಹಣೆಪಟ್ಟಿ ಹಚ್ಚಿಕೊಂಡು ಹೆಲ್ಮೆಟ್ ಧರಿಸದೇ ಬೈಕ್ ಮೇಲೆ ಸಮವಸ್ತ್ರಧಾರಿಯಾಗಿ ಬರುವ ಝೀ ಕನ್ನಡದ 'ಸತ್ಯ'ದ ಇನ್‌ಸ್ಪೆಕ್ಟರ್ ಇದಕ್ಕೆ ಉದಾಹರಣೆ. ಕೊಲೆ ಆಪಾದನೆಯ ವಿಚಾರಣೆ ಬಾಕಿ ಇದ್ದು, ಜಾಮೀನಿನ ಮೇಲೆ ಹೊರಗಡೆ ಇರುವ ಸತ್ಯಳಿಗೆ ಪೊಲೀಸ್ ಹುದ್ದೆ ಸಿಕ್ಕಿರುವುದೇ ಒಂದು ಪವಾಡ.

—ವಿ. ಮುರಳೀಧರ

## ನಾಟಕೀಯ ಕೂಡು ಕುಟುಂಬ

ಝೀ ಕನ್ನಡದ 'ಲಕ್ಷ್ಮೀ ನಿವಾಸ' ಧಾರಾವಾಹಿಯಲ್ಲಿ ಕೂಡುಕುಟುಂಬದ ಕಥೆ ಚೆನ್ನಾಗಿ ಬರುತ್ತಿದೆ. ಆದರೆ, ಮನೆಯ ಯಜಮಾನಿಯ ನಡೆ–ನುಡಿ ಸಹಜವಾಗಿ ಕಾಣಿಸುವುದಿಲ್ಲ. ಸರಳ ಮಾತನ್ನೂ ಬಿಗಿ ಹಿಡಿದು ಹೇಳುವುದು ನಾಟಕೀಯ. ಹಿರಿಸೊಸೆ ಮತ್ತು ಅತ್ತೆಯ ಪಾತ್ರ ಸೂಪರ್ ಆಗಿವೆ.

—ಸೀತಾ ಕೇಶವ ಸಿದ್ದಿ

## ಹೂರಣವೇ ಇಲ್ಲದ ಹೋಳಿಗೆ

ಸಾಮಾನ್ಯವಾಗಿ ಯಾವ ಪತ್ರಿಕೆಯಲ್ಲೂ ಪ್ರಕಟಿಸಲು ಯೋಗ್ಯ ಇರದ ಕಥೆಗಳನ್ನು ಕೋಟ್ಯಂತರ ಮಂದಿ ವೀಕ್ಷಿಸುವ ಟೀವಿಗಳಲ್ಲಿ ಏಕೆ ಹೆಣೆಯಬೇಕು? ಧಾರಾವಾಹಿಯ ರೂಪದ ಇಂತಹ ಕಥೆಗಳು ವೀಕ್ಷಕರ ಅಭಿರುಚಿಯನ್ನೇ ಅಣಕಿಸುತ್ತಿವೆ. ಝೀ ಕನ್ನಡದ 'ಅಮೃತಧಾರೆ', 'ಹಿಟ್ಲರ್ ಕಲ್ಯಾಣ' — ಹೀಗೆ ಪಟ್ಟಿಯನ್ನು ಮುಂದುವರಿಸಬಹುದು.

'ಅಮೃತಧಾರೆ'ಯಲ್ಲಿ ಛಾಯಾಸಿಂಗ್ ಅವರ ಎಡಗೈ ಕೊಂಚವೂ ಅಲುಗಾಡುವುದಿಲ್ಲ. ರೋಬಾಟ್ ಭಂಗಿಯ ನಿಲುವಿನಲ್ಲೇ ಅವರು ಕಾಣಿಸುತ್ತಾರೆ. ಗಾಢ ಅಲಂಕಾರ ಆ ಪಾತ್ರದ ಅಂದವನ್ನೇ ಕೆಡಿಸುತ್ತಿದೆ. ಕಥೆಯಲ್ಲಿ ಹೂರಣವೇ ಇಲ್ಲದ ಸಪ್ಪೆಕಣಕದ ಮಾತಿಗೆ ಬರವಿಲ್ಲ. ಸದ್ಯ ಹಿಟ್ಲರ್ ಮುಗಿದಿದೆ. ಅಲ್ಲಿ 'ಸೀತಾರಾಮ' ಚೆನ್ನಾಗಿ ಬರ್ತಾ ಇದೆ. ಈಗಿರುವ ಗಾಂಭೀರ್ಯ ಕಳೆದುಕೊಳ್ಳದೆ ಮುಂದುವರಿಸಲಿ ಎಂದು ಆಶಿಸುವೆ.

—ಚಂದ್ರಿಕಾ ವೈ.ವಿ.